

# ಮಲೆಯ ಕೋಟೆಯಲಿ ಮಳೆಮಂಜಿನ ಹಾಡು



ನಾವು ನೋಡ ನೋಡುತ್ತಿದ್ದಂತೆಯೇ ಗತಕಾಲದ ಕುರುಹುಗಳನ್ನು ಮೈಮೇಲೆಲ್ಲ ಹಚ್ಚೆಹಾಕಿಸಿಕೊಂಡಿದ್ದ ಆ ಕೋಟೆ, ಮಂಜಿನ ಕಂಬಳಿ ಹೊದ್ದುಕೊಳ್ಳುತ್ತ ಮಲಗಿಯೇ ಬಿಟ್ಟಿತ್ತು! ಆವರೆಗೆ ಹಸಿರಾಗಿದ್ದ ಅದರ ಆಸುಪಾಸಿನ ಗಿರಿಶೃಂಗಗಳೆಲ್ಲವೂ ಈಗ ಪೂರ್ತಿ ಬೆಳ್ಳಗೆ ಹೊಳೆಯುವ ಆಗಸದ ತುಂಡಿನಂತೆ, ಸುತ್ತಲಿನ ಪ್ರದೇಶವೆಲ್ಲಾ ಆಗ ತಾನೇ ಬಿದ್ದ ಕನಸಿನೊಳಗಿಂದ ಎದ್ದು ಬಂದಂತೆ ಕಾಣಿಸುತ್ತಿತ್ತು.

ಈ ಅಪೂರ್ವ ಲೋಕದ ಸ್ವಪ್ನಸೌಂದರ್ಯವನ್ನು ನಾವು ಕಣ್ತುಂಬಿಕೊಂಡಿದ್ದು ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗ ಕೋಟೆಯ ನೆತ್ತಿಯ ಮೇಲೆ. ಕೆಳದಿ ಸಂಸ್ಥಾನದ ಕೊನೆಯ ರಾಜಧಾನಿಯಾಗಿದ್ದ ಈ ಕವಲೇದುರ್ಗ ಕೋಟೆಯನ್ನು ಮಲೆನಾಡಿನ ಮಳೆಕಾಡಿನಲ್ಲಿ ಮಳೆಗೆ ತೊಯ್ದು ತೊಪ್ಪೆಯಾಗಿ ನೋಡುವ ಖುಷಿಯೇ ಬೇರೆ.

## ಕೋಟೆಯಲ್ಲಿ ಮಳೆಹಾಡು

9ನೇ ಶತಮಾನದಲ್ಲಿ ನಿರ್ಮಾಣವಾದ ಐತಿಹಾಸಿಕ ಕವಲೇದುರ್ಗ ಕೋಟೆಯ ಹಾದಿ ಹಿಡಿದಾಗ ಮುಗಿಲು ಚುಂಬಿಸುವ ಬೆಟ್ಟದಲ್ಲಿ